ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉಡುಪಿ.

ಸೆಷನ್ಸ್ ಕೇಸ್ ನಂಬ್ರ: **15/2020**

ಇವರೊಳಗೆ:

ಫಿರ್ಯಾದಿದಾರರು ವೃತ್ತ ನಿರೀಕ್ಷಕರು, ಉಡುಪಿ ವೃತ್ತ.

- ಮತ್ತು -

ಆರೋಪಿತರು

1. ವಿನಯ್ ದೇವಾಡಿಗ (Abated)
2. ರೋಹಿತ್ ಪಿಂಟೋ
3. ಸುಜಿತ್ ಪಿಂಟೋ @ ಸುಜಿತ್‌ಕುಮಾರ್
4. ಪ್ರದೀಪ್ ಯಾನೆ ಅಣ್ಣು
5. ಅನುಪ್ ಕುಂದರ್
6. ಗಿರೀಶ್ ಶೆಟ್ಟಿ

| | | |
|---|---|---|
| 6 ನೇ ಆರೋಪಿಯ ಹೆಸರು | : | ಗಿರೀಶ್ ಶೆಟ್ಟಿ |
| ತಂದೆಯ ಹೆಸರು | : | ಭೋಜ ಎಂ.ಶೆಟ್ಟಿ |
| ಪ್ರಾಯ | : | 36 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಕಕ್ಕುಂಜೆ, ಶಿವಳ್ಳಿ ಗ್ರಾಮ,<br>ಉಡುಪಿ ತಾಲೂಕು ಮತ್ತು ಜಿಲ್ಲೆ. |

ದಂಡ ಪ್ರಕ್ರಿಯಾ ಸಂಹಿತೆ ಕಲಂ-**313** ರ ರೀತ್ಯಾ ಮಾಡುವ ಆರೋಪಿಯ ವಿಚಾರಣೆ :

ಪ್ರಶ್ನೆ: 1 ಅಭಿಯೋಜನೆ ಪರ ವಿಚಾರಣೆ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರ:

ಪ್ರಶ್ನೆ: 2 ಅಸಾ.1 ರಂಜನ್ ಎಂ. ಇವರು ತನ್ನ ಸಾಕ್ಷ್ಯದಲ್ಲಿ, ದಿ: 06-07-2020 ರಂದು ಮನೆಯಲ್ಲಿ ಟಿವಿ ನೋಡುತ್ತಿದ್ದಾಗ ರಾತ್ರಿ 11-20 ಸಮಯದಲ್ಲಿ ಹೊರಗಡೆ ಶಬ್ದ ಕೇಳಿ ಚಾಸಾ2 ಮತ್ತು 3 ಮನೆಯಿಂದ ಹೊರಗೆ ಬಂದು

ನೋಡಿದಾಗ ಮನೆಯ ಗೇಟಿನ ಹೊರಗಡೆ ಗಲಾಟೆಯಾಗುತ್ತಿದೆ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:3 ಅಸಾ.1 ಮುಂದುವರಿದು,ಹೊರಗೆ ಹೋಗಿ ನೋಡುವಾಗ ಯೋಗಿಶನು ಸಿಮೆಂಟ್ ರಸ್ತೆಯ ಮೇಲೆ ಬಿದ್ದುಕೊಂಡಿದ್ದನೆಂದು, ಆತನ ಹೊಟ್ಟೆಗೆ, ಎದೆಗೆ ಮತ್ತು ಮೂರು ನಾಲ್ಕು ಕಡೆ ಚುಚ್ಚಿದ ಗಾಯಗಳಾಗಿ ರಕ್ತ ಚೆಲ್ಲಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:4 ಅಸಾ.1 ಮುಂದುವರಿದು, ಬೆಳಗ್ಗಿನ ಜಾವ ಸುಮಾರು 2-30 ರಿಂದ 3-00 ಗಂಟೆಯ ಸಮಯದಲ್ಲಿ ಮಲ್ಪೆ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:5 ಅಸಾ.1 ಮುಂದುವರಿದು, ದಿನಾಂಕ 07-07-2020 ರಂದು ಪೋಲಿಸರು ಬೆಳಿಗ್ಗೆ 5-00 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದಿದ್ದು ಮೃತ ದೇಹ ಬಿದ್ದಿದ್ದ ಜಾಗವನ್ನು ಅವರಿಗೆ ತೋರಿಸಿದ್ದೇನೆ ಮತ್ತು ಅವರು ಸ್ಥಳದಲ್ಲಿ ಮಹಜರು ತಯಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:6 ಅಸಾ.1 ಮುಂದುವರಿದು, ಯೋಗಿಶ್ ಪೂಜಾರಿಯ ಬೈಕ್ ಆತ ಬಿದ್ದ ಸ್ಥಳದಿಂದ ಐದಾರು ಮೀಟರ್ ದೂರದಲ್ಲಿ ಬಿದ್ದಿತ್ತೆಂದು, ಪೋಲಿಸರು ಹತ್ತಿ ಬಟ್ಟೆಯಿಂದ ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಸಂಗ್ರಹಿಸಿ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿದ್ದು, ಸಾದಾ ಹತ್ತಿಯನ್ನು ಸಹಾ ಸಂಗ್ರಹಿಸಿ ಪ್ಯಾಕ್ ಮಾಡಿ ಅಮಾನತ್ತು

ಪಡಿಸಿಕೊಂಡಿರುತ್ತಾರೆಂದು ಹಾಗೂ ಪೋಟೋಗಳನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ7 ಅಸಾ.2 ಸುಲಕ್ಷಿತಾರವರು ತಮ್ಮ ಸಾಕ್ಷ್ಯದಲ್ಲಿ, ದಿಃ 06-07-2020 ರಂದು ಮನೆಯಲ್ಲಿ ರಾತ್ರಿ 11-30 ರ ಸಮಯದಲ್ಲಿ ಓದುತ್ತಿದ್ದಾಗ ಮನೆಯ ಹೊರಗಡೆ ರಸ್ತೆಯಲ್ಲಿ ಬೈಕ್ ಬಿದ್ದ ಶಬ್ದ ಕೇಳಿದ್ದು, ಚಾಸಾ3 ರವರನ್ನು ಎಬ್ಬಿಸಿ ಗೇಟಿನ ಹತ್ತಿರ ರಸ್ತೆಗೆ ಹೋಗಿ ನೋಡಿದಾಗ ಅವರ ಮನೆಯ ಕಂಪೌಂಡ್ ಗಿಂತ ಸ್ವಲ್ಪ ದೂರದಲ್ಲಿ ಐದಾರು ಜನರ ಜೊತೆಗೆ ತನ್ನ ಅಣ್ಣ ಯೋಗಿಶ್ ಪೂಜಾರಿ ಮಾತನಾಡುತ್ತಿರುವುದನ್ನು ನೋಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ8 ಅಸಾ.2 ಮುಂದುವರಿದು, ಅಣ್ಣನ ಹತ್ತಿರ ಹೋಗಿ ನೋಡಿದಾಗ, ಆತ ರಸ್ತೆ ಮೇಲೆ ಬಿದ್ದಿದ್ದು, ಆತನಿಗೆ ಹಲ್ಲೆ ಮಾಡಿದ ಆರು ಜನರು ಓಡಿ ಹೋಗಿ ರುತ್ತಾರೆಂದು, ಆತನ ಹೊಟ್ಟೆಗೆ, ಎದೆಗೆ ಮತ್ತು ಮೂರು ನಾಲ್ಕು ಕಡೆ ಚುಚ್ಚಿದ ಗಾಯಗಳಾಗಿ ರಕ್ತ ಚೆಲ್ಲಿತ್ತೆಂದು, ಮನೆಯಿಂದ ಬೈರಾಸು ತಂದು ರಕ್ತ ಸುರಿಯದಂತೆ ಕಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ9 ಅಸಾ.3 ಶ್ರೀಮತಿ ರತಿ ಸುವರ್ಣ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ: 06-07-2020 ರಂದು ರಾತ್ರಿ 11-30 ರ ಸಮಯದಲ್ಲಿ ಮನೆಯಲ್ಲಿ ಮಲಗಿದ್ದಾಗ ಮನೆಯ ಹೊರಗಡೆ ರಸ್ತೆಯಲ್ಲಿ ಬೈಕ್ ಬಿದ್ದ ಶಬ್ದ ಕೇಳಿ ಗೇಟಿನ ಹತ್ತಿರ ರಸ್ತೆಗೆ ಹೋಗಿ ನೋಡಿದಾಗ ಅವರ ಮನೆಯ ಕಂಪೌಂಡ್

ಗಿಂತ ಸ್ವಲ್ಪ ದೂರದಲ್ಲಿ ಐದಾರು ಜನರ ಜೊತೆಗೆ ಯೋಗಿಶ್ ಪೂಜಾರಿ ಮಾತನಾಡುತ್ತಿರುವುದನ್ನು ನೋಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ10 ಅಸಾ.3 ಮುಂದುವರಿದು, ಹತ್ತಿರ ಹೋಗಿ ನೋಡಿದಾಗ ಆತ ರಸ್ತೆ ಮೇಲೆ ಬಿದ್ದಿದ್ದು, ಆತನಿಗೆ ಹಲ್ಲೆ ಮಾಡಿದ ಆರು ಜನರು ಓಡಿ ಹೋಗಿರು ತ್ತಾರೆಂದು, ಆತನ ಹೊಟ್ಟೆಗೆ, ಎದೆಗೆ ಮತ್ತು ಮೂರು ನಾಲ್ಕು ಕಡೆ ಚುಚ್ಚಿದ ಗಾಯಗಳಾಗಿ ರಕ್ತ ಚೆಲ್ಲಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ11 ಅಸಾ.4 ಶೇಖರ ಪೂಜಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ಮೂರು ವರ್ಷಗಳ ಹಿಂದೆ ಚಿಕಿತ್ಸೆ ಪಡೆದು ಸಂಜೆ ಮನೆಗೆ ಬಂದು ವಿಶ್ರಾಂತಿ ಪಡೆಯುತ್ತಿದ್ದು, ರಾತ್ರಿ 11-00 ಗಂಟೆಗೆ ಅವರ ಮನೆಯ ಬಳಿ ಬೊಬ್ಬೆಯ ಶಬ್ದ ಕೇಳಿ ಎಚ್ಚರವಾಗಿ ಹೊರಗೆ ಬಂದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ12 ಅಸಾ.4 ಮುಂದುವರಿದು, ಅಸಾ2 ರವರು ಯಾರೋ ನಾಲ್ಕು ಮಂದಿ ಮನೆಯ ಹೊರಗಡೆ ರಸ್ತೆಯಲ್ಲಿ ಯೋಗಿಶ್ ಪೂಜಾರಿಗೆ ಚಾಕುವಿನಿಂದ ಇರಿದು ಹಲ್ಲೆ ಮಾಡಿ ಹೋಗಿದ್ದಾರೆ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:13 ಅಸಾ.4 ಮುಂದುವರಿದು, ಹೋಗಿ ನೋಡಿದಾಗ ಆತ ರಸ್ತೆ ಮೇಲೆ ಬಿದ್ದಿದ್ದು, ಆತನಿಗೆ ಹಲ್ಲೆ ಮಾಡಿದ ಆರು ಜನರು ಓಡಿ ಹೋಗಿದ್ದು, ಆತನ ಹೊಟ್ಟೆಗೆ, ಎದೆಗೆ ಮತ್ತು ಮೂರು ನಾಲ್ಕು ಕಡೆ ಚುಚ್ಚಿದ ಗಾಯಗಳಾಗಿ ರಕ್ತ ಚೆಲ್ಲಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:14 ಅಸಾ.6 ಸುಧಾಕರ ಪೂಜಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ಕೋವಿಡ್-19 ಲಾಕ್ ಡೌನ್ ಸಮಯದಲ್ಲಿ ಸುಮಾರು ಮೂರು ವರ್ಷಗಳ ಹಿಂದೆ ಒಂದನೇ ಆರೋಪಿ(ಮೃತ ವಿನಯ್ ದೇವಾಡಿಗ) ಮದ್ಯ ಸೇವನೆ ಮಾಡಿರುವ ವಿಚಾರವನ್ನು ಮೃತ ಯೋಗೀಶನು ಊರಿನಲ್ಲಿ ಹೇಳುತ್ತಿದ್ದನೆಂದು ಅವರೊಳಗೆ ಜಗಳವಾಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:15 ಅಸಾ.6 ಮುಂದುವರಿದು, ದಿ: 06-07-2020 ರಂದು ಮನೆಯಲ್ಲಿದ್ದಾಗ ರಾತ್ರಿ ಸುಮಾರು 11-30 ರ ಸಮಯದಲ್ಲಿ ಮೃತ ಯೋಗೀಶನ ಮನೆಯಿಂದ ಬೊಬ್ಬೆ ಕೇಳಿದ್ದು ತಕ್ಷಣ ಅಲ್ಲಿಗೆ ಹೋಗಿ ನೋಡಿದಾಗ ಯೋಗೀಶನ ಬೈಕ್ ಆತನ ಮನೆಯ ಹತ್ತಿರ ರಸ್ತೆಯಲ್ಲಿ ಬಿದ್ದಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:16 ಅಸಾ.6 ಮುಂದುವರಿದು, ಅವರು ನೋಡುವಾಗ ನಾಲ್ಕನೇ ಆರೋಪಿ ಪ್ರದೀಪ್ ಯಾನೆ ಅಣ್ಣು ಯೋಗೀಶನನ್ನು ಹಿಡಿದುಕೊಂಡಿದ್ದರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:17 ಅಸಾ6 ಮುಂದುವರಿದು, 2 ಮತ್ತು 3 ನೇ ಆರೋಪಿತರು ಯೋಗೀಶನ ಹೊಟ್ಟೆಯ ಭಾಗಕ್ಕೆ ಚುಚ್ಚಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:18 ಅಸಾ.6 ಮುಂದುವರಿದು, ನಾವು ಬೊಬ್ಬೆ ಹೊಡೆದಾಗ ಆರೋಪಿತರು ಘಟನಾ ಸ್ಥಳದಿಂದ ಓಡಿ ಹೋಗಿರುತ್ತಾರೆ ಮತ್ತು ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ನೋಡಿ ಗುರುತಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:19 ಅಸಾ.6 ಮುಂದುವರಿದು, ದಿನಾಂಕ 07-07-2020 ರಂದು ಬೆಳಗ್ಗಿನ ಜಾವ 4 ಗಂಟೆ ಸಮಯಕ್ಕೆ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು, ಚಾಸಾ1 ಸ್ಥಳ ತೋರಿಸಿರುತ್ತಾರೆ, ಪೋಲಿಸರು ಸ್ಥಳ ಪರಿಶೀಲಿಸಿ ಪಂಚನಾಮೆ ತಯಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:20 ಅಸಾ.6 ಮುಂದುವರಿದು, ಪೋಲಿಸರು ಸ್ಥಳದಲ್ಲಿ ಬಿದ್ದಿದ್ದ ಮೃತನ ಬೈಕ್, ಆತನ ಚಪ್ಪಲಿ ಮತ್ತು ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಹತ್ತಿಯ ಮೂಲಕ ಸಂಗ್ರಹಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:21 ಅಸಾ.7 ಪ್ರವೀಣ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06-07-2020 ರಂದು ರಾತ್ರಿ 11-30 ರಲ್ಲಿ ಮನೆಯಲ್ಲಿದ್ದಾಗ ದೀಪು ಕೋಟ್ಯಾನ್ ಕರೆ

ಮಾಡಿ ಯೋಗೀಶನಿಗೆ ಚಾಕುವಿನಿಂದ ಬೆನ್ನಿಗೆ, ಹೊಟ್ಟೆಗೆ ತಿವಿದಿರುತ್ತಾರೆ ಮತ್ತು ಕೆಎಂಸಿ ಆಸ್ಪತ್ರೆಗೆ ಸೇರಿಸಿದ್ದಾರೆ ಎಂದು ತಿಳಿಸಿದ್ದು, ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ಮೃತಪಟ್ಟಿದ್ದಾನೆ ಎಂದು ತಿಳಿದು ಬಂತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ22 ಅಸಾ.7 ಮುಂದುವರಿದು, ಯೋಗೀಶನ ಹೊಟ್ಟೆಗೆ ಮತ್ತು ಬೆನ್ನಿಗೆ ಚಾಕು ವಿನಿಂದ ತಿವಿದ ಗಾಯಗಳು ಆಗಿದ್ದವು ಮತ್ತು ವಿಚಾರ ತಿಳಿಯಲಾಗಿ, ಆರೋಪಿತರಾದ ನೀವು ಹಲ್ಲೆ ಮಾಡಿರುತ್ತೀರಿ ಎಂದು ಗೊತ್ತಾಯಿತು ಮತ್ತು ನಿಮ್ಮ ಪರಿಚಯ ಇದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ23 ಅಸಾ.7 ಮುಂದುವರಿದು, ದಿನಾಂಕ 08-07-2020 ರಂದು ಬೆಳಿಗ್ಗೆ 7-30 ರ ಸಮಯದಲ್ಲಿ ಪೋಲಿಸರು ಅವರನ್ನು ವೃತ್ತ ಕಚೇರಿಗೆ ಕರೆಸಿದ್ದು, ಅವರ ಜೊತೆ ಚಾಸಾ13 ಇದ್ದರು, ಕಚೇರಿಯಲ್ಲಿ 1 ರಿಂದ 4 ನೇ ಆರೋಪಿತರು ಪೋಲಿಸರ ವಶದಲ್ಲಿ ಇದ್ದರು ಮತ್ತು ಸ್ವಇಚ್ಛಾ ಹೇಳಿಕೆಗಳನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ24 ಅಸಾ.7 ಮುಂದುವರಿದು, ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯ ನಡೆಸಿದ ಸ್ಥಳ, ಕೊನೆಯದಾಗಿ ಮೃತ ವ್ಯಕ್ತಿ ಬಿದ್ದ ಸ್ಥಳ, ಕೃತ್ಯದ ಪೂರ್ವದಲ್ಲಿ ಕಾರನ್ನು ನಿಲ್ಲಿಸಿದ ಸ್ಥಳ, ಕೃತ್ಯಕ್ಕೆ ಬಳಸಿದ ಚೂರಿ ಮತ್ತು 4 ನೇ ಆರೋಪಿ ಧರಿಸಿದ್ದ ಬಟ್ಟೆ ಬಿಸಾಡಿದ ಸ್ಥಳ ತೋರಿಸಿಕೊಡುತ್ತೇವೆ ಎಂದು ಹೇಳಿರುತ್ತಾರೆಂದು ಮತ್ತು ಆ

ಪ್ರಕಾರ ಆರೋಪಿ-1 ರಿಂದ 4 ಅವರನ್ನು ಮತ್ತು ಪೋಲಿಸರನ್ನು ಸದ್ರಿ ಸ್ಥಳಗಳಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ25 ಅಸಾ.7 ಮುಂದುವರಿದು, ನೀವು ಅವರನ್ನು ಲಕ್ಷ್ಮೀನಗರದ ಮೂರನೇ ಅಡ್ಡ ರಸ್ತೆಯ ಬಳಿ ಕರೆದುಕೊಂಡು ಹೋಗಿ ಅಲ್ಲಿಂದ 100 ಮೀ. ಮುಂದಕ್ಕೆ ಹೋಗಿ ವಾಹನ ನಿಲ್ಲಿಸಿ ಕಾಂಕ್ರೀಟ್ ರಸ್ತೆಯಲ್ಲಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಯೋಗೀಶನಿಗೆ ಚಾಕು ಇರಿದ ಸ್ಥಳ ಎಂದು ತೋರಿಸಿರುತ್ತೀರಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ26 ಅಸಾ.7 ಮುಂದುವರಿದು, ಅಲ್ಲಿಂದ ಸುಮಾರು 60 ಅಡಿ ದೂರದಲ್ಲಿ ಜಾಗವನ್ನು ತೋರಿಸಿ ಯೋಗೀಶ್ ಬಿದ್ದ ಸ್ಥಳ ಎಂದು ಹೇಳಿದ್ದು ಪೋಲಿಸರು ಎರಡೂ ಸ್ಥಳಗಳನ್ನು ಪರಿಶೀಲಿಸಿ ಪಂಚನಾಮೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ27 ಅಸಾ.7 ಮುಂದುವರಿದು, ಅಲ್ಲಿಂದ 100 ಮೀ. ನಷ್ಟು ದೂರ ಕರೆದುಕೊಂಡು ಹೋಗಿ ಹಲ್ಲೆ ಮಾಡಲು ಉಪಯೋಗಿಸಿದ ವ್ಯಾಗನರ್ ಕಾರನ್ನು ನಿಲ್ಲಿಸಿದ ಸ್ಥಳ ಎಂದು ತೋರಿಸಿದ್ದು ಮತ್ತು ಅಲ್ಲಿಂದ 50 ಅಡಿ ದೂರದಲ್ಲಿ ಗಿಡಗಂಟೆಗಳು ಬೆಳೆದ ಸ್ಥಳವನ್ನು ತೋರಿಸಿ ಪ್ಲಾಸ್ಟಿಕ್ ಚೀಲದಲ್ಲಿ ಬಟ್ಟೆ ಮತ್ತು ಚಾಕುವನ್ನು ಎಸೆದಿರುವುದಾಗಿ ಹೇಳಿ ಸ್ಥಳ ತೋರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ28 ಅಸಾ.7 ಮುಂದುವರಿದು, ಸದ್ರಿ ಸ್ಥಳದಲ್ಲಿ ಹುಡುಕಾಡಿದಾಗ ಪ್ಲಾಸ್ಟಿಕ್ ಚೀಲ ಇದ್ದು ಅದರಲ್ಲಿ ರಕ್ತ ತಾಗಿದ ಬಟ್ಟೆ ಹಾಗೂ ಚಾಕು ದೊರೆತಿರುತ್ತದೆ, ಆ ಬಟ್ಟೆಗಳು ನಾಲ್ಕನೇ ಆರೋಪಿ ಪ್ರದೀಪ್ ಕೃತ್ಯದ ಸಮಯ ಧರಿಸಿದ ಬಟ್ಟೆ ಯಾಗಿದ್ದು ಮತ್ತು ಹಲ್ಲೆ ಮಾಡಲು ಎರಡನೇ ಆರೋಪಿ (ರೋಹಿತ್ ಪಿಂಟೋ) ಉಪಯೋಗಿಸಿದ ಚಾಕು ಎಂದು ತೋರಿಸಿದ್ದು, ಪೋಲಿಸರು ಅವುಗಳನ್ನು ಅಮಾನತ್ತು ಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ29 ಅಸಾ.8 ಉದಯ ಪೂಜಾರಿ ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07-07-2020 ರಂದು ತನಿಖಾಧಿಕಾರಿ ಜೊತೆ ಆರೋಪಿತರ ಪತ್ತೆಗಾಗಿ ಸಂಜೆ 7-30 ಕ್ಕೆ ಹೊರಟು ರಾತ್ರಿ 9-30 ರ ಸಮಯದಲ್ಲಿ ಕಲ್ಯಾಣಪುರದ ಕೋಡಿ ರಸ್ತೆ ಹತ್ತಿರ ಒಂದು ವ್ಯಾಗ್ನರ್ ಕಾರು ಬಂದಿದ್ದು, ಪೋಲಿಸರು ತಡೆದು ನಿಲ್ಲಿಸಿದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ30 ಅಸಾ.8 ಮುಂದುವರಿದು, ಕಾರಿನಲ್ಲಿದ್ದವರು ಓಡಲು ಪ್ರಯತ್ನಿಸಿದ್ದು,ನಾಲ್ಕು ಜನರನ್ನು ಹಿಡಿದು ವಿಚಾರಿಸಿದಾಗ ತಮ್ಮ ಹೆಸರು ತಿಳಿಸಿದ್ದು, ಅವರು ಕೊಲೆ ಪ್ರಕರಣದಲ್ಲಿ ಬಾಗಿಯಾಗಿದ್ದಾರೆ ಎಂದು ತಿಳಿಯಿತು, ಅವರನ್ನು ದಸ್ತಗಿರಿ ಮಾಡಿ ಅವರ ಬಳಿ ಇದ್ದ 2 ರಿಂದ 3 ಮೊಬೈಲ್‌ಗಳನ್ನು ಮಹಜರು ಬರೆದು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:31 ಅಸಾ.8 ಮುಂದುವರಿದು, ನ್ಯಾಯಾಲಯದ ಮುಂದೆ ಇರುವ 4 ನೇ ಆರೋಪಿ ಹಾಗೂ 1 ಮತ್ತು 2 ನೇ ಆರೋಪಿತರನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:32 ಅಸಾ.9 ಸತೀಶ್ ಆಚಾರಿ ತಮ್ಮ ಸಾಕ್ಷ್ಯದಲ್ಲಿ, ಆರೋಪಿ-1, 2 ಮತ್ತು 3 ರಿಂದ 6 ರವರ ಪರಿಚಯ ಇದೆ ಮತ್ತು ಕೋವಿಡ್-19 ಸಮಯದಲ್ಲಿ ಮೃತ ಯೋಗೀಶ್ ಮತ್ತು 1 ನೇ ಆರೋಪಿ ಮಧ್ಯೆ ಮದ್ಯಪಾನದ ವಿಚಾರದಲ್ಲಿ ಗಲಾಟೆಯಾಗಿ ದ್ವೇಷ ಇತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:33 ಅಸಾ.9 ಮುಂದುವರಿದು, ದಿನಾಂಕ 06-07-2020 ರಂದು ರಾತ್ರಿ 11 ಗಂಟೆಗೆ ಮನೆಯಲ್ಲಿ ಮಲಗಿದ್ದಾಗ ಬೊಬ್ಬೆ ಕೇಳಿ ರಸ್ತೆಗೆ ಬಂದು ನೋಡಿದಾಗ ಯೋಗೀಶ್‌ನ ಬೈಕ್ ರಸ್ತೆಯಲ್ಲಿ ಬಿದ್ದಿತ್ತು, ರಸ್ತೆಯಲ್ಲಿ ರಕ್ತದ ಕಲೆಗಳು ಇದ್ದವು, ಸ್ವಲ್ಪ ಮುಂದೆ ಸಾಹೇಬರ ಮನೆ ಬಳಿ ಒಂದನೇ ಆರೋಪಿ ಚಾಕುವಿನಿಂದ ಯೋಗೀಶ್ ನ ಹೊಟ್ಟೆಗೆ ತಿವಿದಿರುತ್ತಾನೆ ಮತ್ತು ಆತನ ಜೊತೆ ಆರೋಪಿತರಾದ ನೀವು ಇದ್ದಿರುತ್ತೀರಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:34 ಅಸಾ.9 ಮುಂದುವರಿದು, ಅವರು ನಿಮ್ಮನ್ನು ಮತ್ತು ಕೃತ್ಯದಲ್ಲಿ ಉಪಯೋಗಿಸಿದ ಚಾಕು ಮತ್ತು ಮೋಟಾರ್ ಸೈಕಲ್ ಹಾಗೂ ಕಾರನ್ನು

ನೋಡಿ ಗುರುತಿಸಿರುವ ಬಗ್ಗೆ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ35 ಅಸಾ.9 ಮುಂದುವರಿದು, ಮದ್ಯಪಾನ ಮಾಡುವ ವಿಚಾರದಲ್ಲಿ ಗಲಾಟೆ ಯಾಗಿ ಆರೋಪಿತರಾದ ನೀವು ಯೋಗಿಶನ ಕೊಲೆ ಮಾಡಿರುವುದಾಗಿ ಗೊತ್ತಾಯಿತು ಮತ್ತು ಅದರ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಮತ್ತು 1 ರಿಂದ 4 ನೇ ಆರೋಪಿತರನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ36 ಅಸಾ.10 ಸದಾಶಿವ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06-07-2020 ರಂದು ರಾತ್ರಿ 10 ಗಂಟೆಗೆ ಊಟ ಮಾಡಿ ಮನೆಯ ಅಂಗಳದಲ್ಲಿದ್ದಾಗ ಒಂದು ವ್ಯಾಗ್ನರ್ ಕಾರು ಸುಮಾರು ರಾತ್ರಿ 10-30 ರ ಸಮಯದಲ್ಲಿ ಬಂದಿದ್ದು, ಅದರಲ್ಲಿ ಆರು ಜನ ಇದ್ದು, ಎರಡನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ37 ಅಸಾ.10 ಮುಂದುವರಿದು, ರಾತ್ರಿ ಸುಮಾರು 12 ಗಂಟೆಗೆ ಯೋಗಿಶನಿಗೆ ಚೂರಿಯಿಂದ ಇರಿದು ಹೋದ ವಿಚಾರ ಪಕ್ಕದ ಮನೆಯವರಿಂದ ತಿಳಿಯಿತು, ಮನೆಯಿಂದ ಹೊರಗೆ ನೋಡಿದಾಗ ವ್ಯಾಗ್ನರ್ ಕಾರು ಸ್ಥಳದಲ್ಲಿ ಇರಲಿಲ್ಲ, ಸ್ಥಳಕ್ಕೆ ಹೋಗಿ ನೋಡಿದಾಗ ಯೋಗಿಶ್ ರಸ್ತೆಗೆ ಬಿದ್ದಿದ್ದ ಮತ್ತು

ಆತನ ಬೈಕ್ ಸಹಾ ರಸ್ತೆಯಲ್ಲಿ ಬಿದ್ದಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ38 ಅಸಾ.10 ಮುಂದುವರಿದು, ಲಾಕ್‌ಡೌನ್ ಸಮಯದಲ್ಲಿ ಶರಾಬು ಕುಡಿಯುವ ವಿಚಾರದಲ್ಲಿ ಒಂದನೇ ಆರೋಪಿ ಮತ್ತು ಯೋಗಿಶ್ ಮಧ್ಯೆ ಗಲಾಟೆಯಾಗಿ ಅದೇ ದ್ವೇಷದಿಂದ ಒಂದನೇ ಆರೋಪಿ ನಿಮ್ಮೊಂದಿಗೆ ಸೇರಿಕೊಂಡು ಕೊಲೆ ಮಾಡಿರುವ ವಿಚಾರ ಗೊತ್ತಾಯಿತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ39 ಅಸಾ.11 ಸತೀಶ್ ತಮ್ಮ ಸಾಕ್ಷ್ಯದಲ್ಲಿ, ಮೂರು ವರ್ಷದ ಹಿಂದೆ ಪೋಲಿಸರು ಮಲ್ಪೆ ಠಾಣೆಗೆ ಕರೆಸಿದ್ದು, ಅಲ್ಲಿ 1 ಮತ್ತು 3 ನೇ ಆರೋಪಿತರು ಇದ್ದರೆಂದು ಮತ್ತು ನೀವು ಅವರನ್ನು ಹಾಗೂ ಪೋಲಿಸರನ್ನು ಕರೆದುಕೊಂಡು ಹೋಗಿ ಕೊಲೆಗೆ ಸಂಚು ರೂಪಿಸಿದ ಮನೆ ತೋರಿಸಿದ್ದು, ಪೋಲಿಸರು ನಿಪಿ-48 ರಂತೆ ಮಹಜರು ಜರುಗಿಸಿ ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ40 ಅಸಾ.11 ಮುಂದುವರಿದು, ಕೃತ್ಯದ ಸಮಯ ಧರಿಸಿದ್ದ ಬಟ್ಟೆಗಳನ್ನು ಎಸೆದ ಸ್ಥಳ ತೋರಿಸುವುದಾಗಿ ತಿಳಿಸಿ ಸಾಯಿಬಾಬಾ ನಗರದ ಹೊಳೆಯ ಸೇತುವೆ ಬಳಿ ಕರೆದುಕೊಂಡು ಹೋಗಿ ನದಿಗೆ ಬಟ್ಟೆಗಳನ್ನು ಎಸೆದಿರುವುದಾಗಿ ತೋರಿಸಿರುತ್ತಾರೆ ಮತ್ತು ಪೋಲಿಸರು ನಿಪಿ-51 ಪ್ರಕಾರ ಮಹಜರು ಜರುಗಿಸಿ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ41 ಅಸಾ.11 ಮುಂದುವರಿದು, ಮರುದಿನ ಪುನಃ ಪೋಲಿಸರು ಠಾಣೆಗೆ ಕರೆಸಿದಾಗ ವಿನಯ ದೇವಾಡಿಗ ಠಾಣೆಯಲ್ಲಿದ್ದು, ಅವರನ್ನು ಸುಬ್ರಹ್ಮಣ್ಯ ನಗರದ ಒಂಭತ್ತನೇ ಕ್ರಾಸ್ ಬಳಿ ಕರೆದುಕೊಂಡು ಹೋಗಿ ರಸ್ತೆಯ ಪಶ್ಚಿಮ ಬದಿಯ ಕಾಂಪೌಂಡ್ ಹತ್ತಿರ ನಿಲ್ಲಿಸಿದ್ದ ಸ್ಕೂಟರ್ ತೋರಿಸಿ ಕೃತ್ಯದ ಸಮಯ ಅದನ್ನು ಬಳಸಿರುವುದಾಗಿ ಹೇಳಿದ್ದು, ಪೋಲಿಸರು ಮಹಜರು ಮೂಲಕ ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ42 ಅಸಾ.12 ಗಿರೀಶ್, ಸಹಾಯಕ ಅಭಿಯಂತರರು ತಮ್ಮ ಸಾಕ್ಷದಲ್ಲಿ, ದಿನಾಂಕ 07-08-2020 ರಂದು ಎಚ್.ಸಿ.1159 ರವರ ಜೊತೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ನಿಪಿ-55 ರಂತೆ ನಕಾಶೆ ತಯಾರಿಸಿ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ43 ಅಸಾ.13 ಶರತ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07-07-2020 ರಂದು ಕೆಎಂಸಿ ಶವಾಗಾರದಲ್ಲಿ ಇರಿಸಿದ್ದ ಯೋಗಿಶನ ಶವ ಪಂಚನಾಮೆಯ ಸಮಯದಲ್ಲಿ ಹಾಜರಿದ್ದು, ಶವದ ಹೊಟ್ಟೆ, ಪಕ್ಕೆಲುಬು, ಬೆನ್ನೆಲುಬಿನಲ್ಲಿ 6 ಚುಚ್ಚಿದ ಗಾಯಗಳು ಇದ್ದು, ಅವುಗಳನ್ನು ನೋಡಿ ಕೊಲೆಯಾಗಿದೆ ಎಂದು ಅಭಿಪ್ರಾಯ ಪಟ್ಟಿರುವುದಾಗಿ ಮತ್ತು ಪೋಲಿಸರು ನಿಪಿ-57 ರಂತೆ ಶವ ಪಂಚನಾಮೆ ಜರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:44 ಅಸಾ.14 ಸುಧಾಕರ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 12-07-2020 ರಂದು ಬೆಳಿಗ್ಗೆ 8 ಗಂಟೆಗೆ ಉಡುಪಿ ವೃತ್ತ ಕಚೇರಿಗೆ ಕರೆಸಿದ್ದು, ಆತನ ಜೊತೆ ಚಾಸಾ17 ಸಹಾ ಇದ್ದು, ಠಾಣೆಯಲ್ಲಿ 5 ನೇ ಆರೋಪಿ ಅನುಪ್ ಕುಂದರ್ ಇದ್ದರು ಮತ್ತು ಅವರು ಹಾಜರುಪಡಿಸಿದ ಕೃತ್ಯಕ್ಕೆ ಉಪಯೋಗಿಸಿದ ಮೊಬೈಲ್ ಫೋನನ್ನು ವಶಪಡಿಸಿಕೊಂಡು ದಸ್ತಗಿರಿ ಮಾಡಿ ನಿಪಿ-58 ರಂತೆ ಪಂಚನಾಮೆ ತಯಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:45 ಅಸಾ.15 ವಿಶ್ವನಾಥ ಶೆಟ್ಟಿ ಪಿ.ಸಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 08-07-2020 ರಂದು ತಮ್ಮ ಸ್ವಂತ ಕ್ಯಾಮರಾದೊಂದಿಗೆ ಆರೋಪಿಯು ತನಿಖಾಧಿಕಾರಿಗೆ ತೋರಿಸಿಕೊಟ್ಟ ಸ್ಥಳ ಮಹಜರು ಮತ್ತು ಸೊತ್ತು ಸ್ವಾಧೀನತಾ ಮಹಜರು ಸಮಯದಲ್ಲಿ ಛಾಯಾ ಚಿತ್ರ ತೆಗೆದು, ಸಿಡಿಗೆ ವರ್ಗಾಯಿಸಿ ಕಲಂ 65 ಬಿ ಧೃಡಪತ್ರದೊಂದಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:46 ಅಸಾ.16 ಕಸ್ತೂರಿ ಒಡೆಯರ್, ವೈಜ್ಞಾನಿಕ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27-08-2020 ರಂದು ತನಿಖಾಧಿಕಾರಿ 9 ಸೀಲು ಮಾಡಿದ ಸೊತ್ತುಗಳನ್ನು ಕಳುಹಿಸಿಕೊಟ್ಟಿದ್ದು, ತೆರೆದು ನೋಡಿ ಪರೀಕ್ಷಿಸಿದಾಗ ವಸ್ತು ಸಂಖ್ಯೆ ಬಿ ಹೊರತುಪಡಿಸಿ ಉಳಿದೆಲ್ಲಾ ವಸ್ತುಗಳಿಗೆ ರಕ್ತದ ಕಲೆಗಳು ಇದ್ದು, ಅದು AB ಗುಂಪಿಗೆ ಸೇರಿದ ರಕ್ತವಾಗಿರುತ್ತದೆಂದು ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ47 ಅಸಾ.17 ತಿಮ್ಮೇಶ್, ಪಿ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07-07-2020 ರಂದು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯರಾತ್ರಿ 2-30 ರಲ್ಲಿ ಚಾಸಾ1 ನೀಡಿದ ಲಿಖಿತ ದೂರನ್ನು ದಾಖಲಿಸಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ48 ಅಸಾ.17 ಮುಂದುವರಿದು, ಚಾಸಾ.44 ರವರ ಜೊತೆ ಆರೋಪಿಯ ಪತ್ತೆಗೆ ಹೋಗಿದ್ದು, ರಾತ್ರಿ 9-30 ರಲ್ಲಿ ಮೂಡುತೋನ್ಸೆ ಗ್ರಾಮದ ಕೋಟೆ ರಸ್ತೆ ಪ್ರೇಮ ಜತ್ತನ್ನ ಮನೆಯ ಬಳಿ ಆರೋಪಿತರಾದ ನೀವು ಕಾರಿನಲ್ಲಿ ಬಂದಿದ್ದು, ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದಾಗ 1 ರಿಂದ 3 ನೇ ಆರೋಪಿತರು ಕಾರಿನಿಂದ ಇಳಿದು ಓಡಿ ಹೋಗಲು ಪ್ರಯತ್ನಿಸಿದಾಗ ಅವರನ್ನು ಹಿಡಿದು ವಶಕ್ಕೆ ಪಡೆದು ಕಾರನ್ನು ಜಪ್ತುಗೊಳಿಸಿ ದಸ್ತಗಿರಿ ಮಾಡಿರುವುದಾಗಿ ಮತ್ತು ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಸಂತೆಕಟ್ಟೆ ಬಳಿ 5 ನೇ ಆರೋಪಿಯನ್ನು ಸ್ಕೂಟರ್ ಸಮೇತ ವಶಕ್ಕೆ ಪಡೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ49 ಅಸಾ.18 ಜಗದೀಶ್, ಪಿ.ಸಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ17-08-2020 ರಂದು ವೈದ್ಯಾಧಿಕಾರಿಗಳು ಶವ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿದ್ದ ವಿಸೇರಾ ಮತ್ತು ಮೃತನ ಬಟ್ಟೆಗಳನ್ನು ಪಡೆದುಕೊಂಡು ತನಿಖಾಧಿಕಾರಿ ಸಮಕ್ಷಮ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:50 ಅಸಾ.19 ಡಾ.ಅನಿತಾ, ಅಸೋಸಿಯೇಟ್ ಪ್ರೊಫೆಸರ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07-07-2020 ರಂದು ಮೃತ ಯೋಗೀಶ್‌ನ ಮರಣೋತ್ತರ ಪರೀಕ್ಷೆ ಮಾಡಿದ್ದು, ಆತ ಹೊಟ್ಟೆಗೆ ಚುಚ್ಚಿದ ಗಾಯಗಳಿಂದ ಮೃತಪಟ್ಟಿರುತ್ತಾನೆಂದು, ಈ ಬಗ್ಗೆ ನಿಪಿ-68 ರಂತೆ ಅಭಿಪ್ರಾಯ ನೀಡಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:51 ಅಸಾ.19 ಮುಂದುವರಿದು, ದಿಃ03-03-2021 ರಂದು ತನಿಖಾಧಿಕಾರಿ ಕೃತ್ಯಕ್ಕೆ ಬಳಸಿದ ಮುದ್ದೆಮಾಲು-3 ನ್ನು ಹಾಜರುಪಡಿಸಿ, ಅದರಿಂದ ಹಲ್ಲೆ ಮಾಡಿದಲ್ಲಿ ಮರಣೋತ್ತರ ಪರೀಕ್ಷೆಯಲ್ಲಿ ನಮೂದಿಸಿದ ಗಾಯ-6 ರಿಂದ 8 ಆಗುವ ಸಾಧ್ಯತೆ ಇರುವ ಬಗ್ಗೆ ಅಭಿಪ್ರಾಯ ಕೋರಿದ್ದು, ಅದನ್ನು ಪರೀಕ್ಷಿಸಿ ಸದ್ರಿ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ನಿಪಿ-69 ರಂತೆ ಅಭಿಪ್ರಾಯ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:52 ಅಸಾ.20 ಮಂಜುನಾಥ, ಪೋಲೀಸ್ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ, ದಿಃ 07-07-2020 ರಂದು ತನಿಖೆ ಮುಂದುವರಿಸಿ, ಅದೇ ದಿನ ಬೆಳಿಗ್ಗೆ 4 ಗಂಟೆಗೆ ತಕ್ಷೀರು ಸ್ಥಳದಲ್ಲಿ ಚಾಸಾ1 ತೋರಿಸಿದ ಸ್ಥಳವನ್ನು ಚಾಸಾ.6 ಮತ್ತು 10 ರವರ ಸಮಕ್ಷಮ ಪರಿಶೀಲಿಸಿ ಸ್ಥಳದಲ್ಲಿದ್ದ ರಕ್ತಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ಹತ್ತಿಯಿಂದ ಸಂಗ್ರಹಿಸಿ ಪ್ಲಾಸ್ಟಿಕ್ ಡಬ್ಬಕ್ಕೆ ಹಾಕಿ ಸೀಲು ಮಾಡಿ ನಿಪಿ-2 ರಂತೆ ಪಂಚನಾಮೆ ಜರುಗಿಸಿ ಛಾಯಾ ಚಿತ್ರ ತೆಗೆದಿರುತ್ತಾರೆ ಮತ್ತು ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:53 ಅಸಾ.19 ಮುಂದುವರಿದು, ಬೆಳಿಗ್ಗೆ 8-30 ಗಂಟೆಗೆ ಕೆಎಂಸಿ ಆಸ್ಪತ್ರೆಗೆ ಭೇಟಿ ನೀಡಿ ಶವಗಾರದಲ್ಲಿ ಇರಿಸಿದ್ದ ಮೃತನ ಶವದ ಪಂಚನಾಮೆಯನ್ನು ನಿಪಿ-57 ರಂತೆ ಪಂಚರ ಸಮಕ್ಷಮ ಜರುಗಿಸಿ ಚಾಸಾ5, 7, 19 ರಿಂದ 20 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:54 ಅಸಾ.19 ಮುಂದುವರಿದು, ಆರೋಪಿತರ ಪತ್ತೆಗಾಗಿ ಸಿಬ್ಬಂದಿ ನೇಮಿಸಿದ್ದು, ಅದೇ ದಿವಸ ಆರೋಪಿತರಾದ ನೀವು ಮೂಡುತೋನ್ಸೆ ಗ್ರಾಮದ ಕೋಟೆ ರಸ್ತೆ ಎಂಬಲ್ಲಿ ಇದ್ದೀರಿ ಎಂಬ ಬಗ್ಗೆ ಮಾಹಿತಿ ಬಂದಿದ್ದು, ಸ್ಥಳಕ್ಕೆ ಹೋಗಿ ಕಾಯುತ್ತಿದ್ದಾಗ ರಾತ್ರಿ 9-30 ರ ಹೊತ್ತಿಗೆ ಬಿಳಿ ಬಣ್ಣದ ಕಾರು ಬಂದಿದ್ದು, ಅದನ್ನು ನಿಲ್ಲಿಸಿದಾಗ ಕಾರಿನಲ್ಲಿದ್ದ ನೀವು ಓಡಲು ಪ್ರಯತ್ನಿಸಿದ್ದು ನಿಮ್ಮನ್ನು ಹಿಡಿದು ವಿಚಾರಿಸಲಾಗಿ, ಈ ಪ್ರಕರಣದ ಆರೋಪಿತರು ಎಂದು ತಿಳಿಯಿತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:55 ಅಸಾ.19 ಮುಂದುವರಿದು, ಆರೋಪಿತರಾದ ನಿಮ್ಮನ್ನು ವಶಕ್ಕೆ ಪಡೆದು ಪಂಚರನ್ನು ಬರಮಾಡಿಕೊಂಡು ಒಂದನೇ ಆರೋಪಿಯ ಅಂಗಜಪ್ತಿ ಮಾಡಿ ಆತನ ಕಿಸೆಯಲ್ಲಿದ್ದ ಮೊಬೈಲ್ ಮತ್ತು ಎರಡು ಸಿಮ್ ಹಾಗೂ ಎರಡನೇ ಆರೋಪಿಯ ಬಳಿ ಇದ್ದ ಮೊಬೈಲ್ ಮತ್ತು ಎರಡು ಸಿಮ್ ಮತ್ತು ನಾಲ್ಕನೇ ಆರೋಪಿ ಬಳಿ ಇದ್ದ ಮೊಬೈಲ್ ಸಿಕ್ಕಿದ್ದು, ಆರೋಪಿತರಾದ ನಿಮ್ಮನ್ನು ದಸ್ತಗಿರಿ ಮಾಡಿ ಮೊಬೈಲ್ ಗಳನ್ನು ಮತ್ತು ಕಾರನ್ನು ಪಂಚನಾಮೆ

ಮೂಲಕ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ56 ಅಸಾ.19 ಮುಂದುವರಿದು, ದಿನಾಂಕಃ 08-07-2020 ರಂದು ಪಂಚರನ್ನು ಬರ ಮಾಡಿಕೊಂಡು 1 ರಿಂದ 4 ನೇ ಆರೋಪಿತರ ಸ್ವಇಚ್ಛಾ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ ಮತ್ತು ಹೇಳಿಕೆಯಲ್ಲಿ ಆರೋಪಿತರು ಕೃತ್ಯ ನಡೆದ ಸ್ಥಳ, ಕೃತ್ಯದ ಸಮಯ ಕಾರನ್ನು ನಿಲ್ಲಿಸಿದ ಸ್ಥಳ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಆಯುಧ ಮತ್ತು ಕೃತ್ಯದ ಸಮಯ ಆರೋಪಿ ಅಣ್ಣು ಧರಿಸಿದ್ದ ಬಟ್ಟೆಯನ್ನು ತೋರಿಸುವುದಾಗಿ ಹೇಳಿಕೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ57 ಅಸಾ.19 ಮುಂದುವರಿದು, ಹೇಳಿಕೆ ಪ್ರಕಾರ ಆರೋಪಿತರಾದ ನೀವು ಅವರನ್ನು ಮತ್ತು ಪಂಚರನ್ನು ಲಕ್ಷ್ಮೀನಗರದ ಮೂರನೇ ಕ್ರಾಸ್ ಬಳಿ ಕರೆದುಕೊಂಡು ಹೋಗಿ ಮೃತನ ಮನೆಯ ಎದುರುಗಡೆಯ ರಸ್ತೆಯನ್ನು ತೋರಿಸಿ ಇದೇ ರಸ್ತೆಯಲ್ಲಿ ಕೃತ್ಯ ಎಸಗಿರುವುದಾಗಿ ತಿಳಿಸಿರುತ್ತಾರೆ ಹಾಗೂ ಹಲ್ಲೆಯ ನಂತರ ಮೃತ ಬಿದ್ದ ಸ್ಥಳವನ್ನು ಸಹಾ ತೋರಿಸಿರುತ್ತಾರೆ ಮತ್ತು ಎರಡೂ ಸ್ಥಳಗಳನ್ನು ಪರಿಶೀಲಿಸಿ ನಿಪಿ-39 ರಂತೆ ಪಂಚನಾಮೆ ತಯಾರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:58 ಅಸಾ.19 ಮುಂದುವರಿದು, ಸದ್ರಿ ಸ್ಥಳದಲ್ಲಿ ರಕ್ತದ ಕಲೆಗಳು ಇದ್ದು, ಅಲ್ಲಿಂದ 300 ಮೀ. ನಷ್ಟು ದೂರ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಹಲ್ಲೆ ಮಾಡುವ ಸಮಯ ಕಾರನ್ನು ನಿಲ್ಲಿಸಿದ್ದು ಎಂದು ತೋರಿಸಿಕೊಟ್ಟಿದ್ದು, ನಂತರ ಅಲ್ಲಿಂದ ಸುಮಾರು 20 ಅಡಿ ದೂರ ಕರೆದುಕೊಂಡು ಹೋಗಿ ಆರೋಪಿ ರೋಹಿತ್ ಪಿಂಟೋ ಗಿಡಗಂಟಿಯ ಮಧ್ಯದಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ತೆಗೆದು ತೋರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:59 ಅಸಾ.19 ಮುಂದುವರಿದು, ಅದರಲ್ಲಿ ಒಂದು ಚೂರಿ ಹಾಗೂ ಅಂಗಿ ಇದ್ದು, ಸದ್ರಿ ಚೂರಿಯನ್ನು ಕೃತ್ಯಕ್ಕೆ ಬಳಸಿದ್ದು ಮತ್ತು ಕೃತ್ಯದ ಸಮಯ ನಾಲ್ಕನೇ ಆರೋಪಿ ಧರಿಸಿದ್ದ ಅಂಗಿಯಾಗಿದ್ದು, ಅವುಗಳನ್ನು ಪಂಚರ ಸಮಕ್ಷಮ ನಿಪಿ-42 ರಂತೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:60 ಅಸಾ.19 ಮುಂದುವರಿದು, ಅದೇ ದಿವಸ ಸಾಕ್ಷಿದಾರರಾದ ಚಾಸಾ2, 3 ಮತ್ತು 4 ರವರ ಮರು ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ ಮತ್ತು ಆರೋಪಿತರ ಸ್ವಇಚ್ಛಾ ಹೇಳಿಕೆಯಲ್ಲಿ ಕೊಲೆಗೆ ಸಂಚು ರೂಪಿಸಿದ ಸ್ಥಳ ಹಾಗೂ ತಾವು ಧರಿಸಿದ್ದ ಬಟ್ಟೆಗಳನ್ನು ನಾಲ್ಕನೇ ಆರೋಪಿ ಧರಿಸಿದ್ದ ಶರ್ಟನ್ನು ಹೊರತುಪಡಿಸಿ ಉಳಿದ ಬಟ್ಟೆಗಳನ್ನು ನದಿಗೆ ಎಸೆದಿರುವುದಾಗಿ ಮತ್ತು ಸದ್ರಿ ಸ್ಥಳವನ್ನು ತೋರಿಸುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ61 ಅಸಾ.19 ಮುಂದುವರಿದು, ಹೇಳಿಕೆ ಪ್ರಕಾರ ಆರೋಪಿತರು ಕೊಡವೂರು ಗ್ರಾಮದ ಮೂಡುಬೆಟ್ಟು ಎಂಬಲ್ಲಿ ಕರೆದುಕೊಂಡು ಹೋಗಿ ಆರೋಪಿ ರಂಜಿತ್ ಪಿಂಟೋ ವಾಸ ಇರುವ ಮನೆ ತೋರಿಸಿ ಇದೇ ಸ್ಥಳದಲ್ಲಿ ಕೊಲೆಗೆ ಸಂಚು ರೂಪಿಸಿರುವುದು ಮತ್ತು ಅಲ್ಲಿಂದ ಕೊಡಂಕೂರು ಸಾಯಿಬಾಬು ಮಂದಿರದ ಹತ್ತಿರ ಇರುವ ಸೇತುವೆಯ ಮೇಲೆ ಕರೆದುಕೊಂಡು ಹೋಗಿ ಕೃತ್ಯದ ಸಮಯ ಧರಿಸಿದ್ದ ಬಟ್ಟೆಗಳನ್ನು ಎಸೆದಿರುವುದಾಗಿ ತೋರಿಸಿ ಕೊಟ್ಟಿದ್ದು, ಸದ್ರಿ ಸ್ಥಳಗಳ ಪಂಚನಾಮೆಗಳನ್ನು ಜರುಗಿಸಿ ಛಾಯಾ ಚಿತ್ರಗಳನ್ನು ತೆಗೆದಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ62 ಅಸಾ.19 ಮುಂದುವರಿದು, ದಿನಾಂಕ 10-07-2020 ರಂದು ಆರೋಪಿ ವಿನಯ್ ದೇವಾಡಿಗ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿರುವಂತೆ ನಮ್ಮನ್ನು ಮತ್ತು ಪಂಚರನ್ನು ಸುಬ್ರಹ್ಮಣ್ಯ ನಗರದ 9 ನೇ ಕ್ರಾಸ್ ಬಳಿ ಕರೆದುಕೊಂಡು ಹೋಗಿ ರಸ್ತೆಯ ಪಶ್ಚಿಮ ಬದಿಯ ಕಂಪೌಂಡ್ ಬಳಿ ನಿಲ್ಲಿಸಿದ ಸ್ಕೂಟರನ್ನು ತೋರಿಸಿ ಕೃತ್ಯದ ಸಮಯ ಉಪಯೋಗಿಸಿರುವುದಾಗಿ ಹೇಳಿದ್ದು, ಅದನ್ನು ನಿಪಿ-53 ರಂತೆ ಪಂಚನಾಮೆ ಜರುಗಿಸಿ ಮತ್ತು ಛಾಯಾ ಚಿತ್ರ ತೆಗೆದು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ಚಾಸಾ14 ಮತ್ತು 15 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:63 ಅಸಾ.19 ಮುಂದುವರಿದು, ಉಳಿದ ಆರೋಪಿತರ ಪತ್ತೆಗಾಗಿ ಮಲ್ಪೆ ಪಿ.ಎಸ್.ಐ. ರವರನ್ನು ನೇಮಕ ಮಾಡಿದ್ದು, ಅವರು ದಿಃ 12-07-2020 ರಂದು 5 ನೇ ಆರೋಪಿ ಅನುಪ್ ಕುಂದರ್ ಈತನನ್ನು ವಶಕ್ಕೆ ಪಡೆದು ಹಾಜರುಪಡಿಸಿದ್ದು, ಪಂಚರ ಸಮಕ್ಷಮ ಆತನ ಅಂಗಜಪ್ತಿ ಮಾಡಿ ಮೊಬೈಲ್ ಮತ್ತು ಸ್ಕೂಟರನ್ನು ನಿಪಿ-58 ರಂತೆ ಪಂಚನಾಮೆ ಬರೆದು ಛಾಯಾ ಚಿತ್ರ ತೆಗೆದು ಚಾಸಾ6 ಮತ್ತು 7 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:64 ಅಸಾ.19 ಮುಂದುವರಿದು, ದಿನಾಂಕ 27-07-2020 ರಂದು ತಕ್ಷೀರು ಸ್ಥಳ ಮತ್ತು ಕೊಲೆಗೆ ಸಂಚು ರೂಪಿಸಿದ ಸ್ಥಳಗಳ ದಾಖಲೆಗಳನ್ನು ಒದಗಿಸುವಂತೆ ಮತ್ತು ತಕ್ಷೀರು ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಮನವಿ ಮಾಡಿಕೊಂಡಿದ್ದು, ದಿನಾಂಕ 14-08-2020 ರಂದು ಅಭಿಯಂತರರು ಘಟನಾ ಸ್ಥಳದ ನಕ್ಷೆ ತಯಾರಿಸಿ ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:65 ಅಸಾ.19 ಮುಂದುವರಿದು, ದಿಃ 17-08-2020 ರಂದು ಮರಣೋತ್ತರ ಪರೀಕ್ಷೆಯ ನಂತರ ವೈದ್ಯಾಧಿಕಾರಿಗಳು ಮೃತನ ದೇಹದಿಂದ ಶೇಖರಿಸಿದ ವಿಸೇರಾವನ್ನು ಮತ್ತು ಮೃತನ ಬಟ್ಟೆಗಳನ್ನು ಸಂಗ್ರಹಿಸಿ ಕಳುಹಿಸಿಕೊಟ್ಟಿದ್ದು, ಅವುಗಳನ್ನು ನಿಪಿ-60 ರಂತೆ ಮಹಜರು ಜರುಗಿಸಿ ಅಮಾನತ್ತುಪಡಿಸಿ ಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:66 ಅಸಾ.19 ಮುಂದುವರಿದು, ದಿಃ 28-08-2020 ರಂದು 6 ನೇ ಆರೋಪಿಯಾದ ನೀವು ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ನಿಮ್ಮನ್ನು ದಸ್ತಗಿರಿ ಮಾಡಿ ನಿಮ್ಮ ವಶದಿಂದ ಒಂದು ಪಾಸ್ ಪೋರ್ಟ್, ಮೊಬೈಲ್ ಮತ್ತು ಮೋಟಾರ್ ಸೈಕಲನ್ನು ನಿಪಿ-28 ರಂತೆ ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:67 ಅಸಾ.19 ಮುಂದುವರಿದು, ನೀವು ಆರೋಪಿ ಕೊಟ್ಟ ಸ್ವಇಚ್ಛಾ ಹೇಳಿಕೆಯ ಪ್ರಕಾರ ಅವರನ್ನು ಮತ್ತು ಪಂಚರನ್ನು ಲಕ್ಷ್ಮೀನಗರದ ಮೂರನೇ ಕ್ರಾಸ್ ಬಳಿ ಕರೆದುಕೊಂಡು ಹೋಗಿ ಹಲ್ಲೆ ಮಾಡಿದ ಸ್ಥಳ ಮತ್ತು ಗಾಯಾಳು ಬಿದ್ದ ಸ್ಥಳವನ್ನು ತೋರಿಸಿಕೊಟ್ಟಿದ್ದು, ಸದ್ರಿ ಸ್ಥಳಗಳನ್ನು ನಿಪಿ-31 ರಂತೆ ಪಂಚನಾಮೆ ಜರುಗಿಸಿ ಛಾಯಾ ಚಿತ್ರವನ್ನು ತೆಗೆದಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ:68 ಅಸಾ.20 ಮುಂದುವರಿದು, ಅಲ್ಲಿಂದ ಸ್ವಲ್ಪ ಮುಂದೆ 300 ಮೀ. ದೂರ ಕರೆದುಕೊಂಡು ಹೋಗಿ ಒಂದು ಸ್ಥಳ ತೋರಿಸಿ ಕೃತ್ಯದ ಪೂರ್ವದಲ್ಲಿ ಇದೇ ಸ್ಥಳದಲ್ಲಿ ಕಾರು ನಿಲ್ಲಿಸಿದ ಸ್ಥಳ ಎಂದು ತೋರಿಸಿ ಅಲ್ಲಿಂದ 20 ಅಡಿ ಮುಂದೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಚಾಕು ಮತ್ತು ಕೃತ್ಯದ ಸಮಯ 4 ನೇ ಆರೋಪಿ ಧರಿಸಿದ್ದ ಬಟ್ಟೆ ಎಸೆದ ಜಾಗ ಎಂದು ತೋರಿಸಿಕೊಟ್ಟಿದ್ದು, ಎರಡೂ ಸ್ಥಳಗಳನ್ನು ಪರಿಶೀಲಿಸಿ ನಿಪಿ-34 ರಂತೆ ಪಂಚನಾಮೆ ಬರೆದು ಛಾಯಾ ಚಿತ್ರ ತೆಗೆದಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ69 ಅಸಾ.20 ಮುಂದುವರಿದು, ಮರುದಿನ ಆರೋಪಿ ಅವರನ್ನು ಮತ್ತು ಪಂಚರನ್ನು ಸಾಯಿ ಮಂದಿರದ ಬಳಿ ಇಂದ್ರಾಳಿ ಹೊಳೆ ಸೇತುವೆ ಬಳಿ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ನಿಂತು ಕೃತ್ಯದ ಸಮಯ ಧರಿಸಿದ್ದ ಬಟ್ಟೆಗಳನ್ನು ಹೊಳೆಗೆ ಎಸೆದಿರುವುದಾಗಿ ತೋರಿಸಿಕೊಟ್ಟಿದ್ದು, ಸ್ಥಳ ಪರಿಶೀಲನೆ ಮಾಡಿ ನಿಪಿ-37 ರಂತೆ ಮಹಜರು ತಯಾರಿಸಿ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ70 ಅಸಾ.20 ಮುಂದುವರಿದು, ದಿಃ 29-07-2020 ರಂದು ಚಾಸಾ1 ರಿಂದ 4, 6 ಮತ್ತು 18 ಇವರ ಮರು ಹೇಳಿಕೆಗಳನ್ನು ಪಡೆದು ಒಂದನೇ ಆರೋಪಿ ವಿರುದ್ಧ ಎರಡು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಎರಡನೇ ಆರೋಪಿ ವಿರುದ್ಧ ಎರಡು ಪ್ರಕರಣಗಳು ದಾಖಲಾಗಿದ್ದು, ಮೂರನೇ ಆರೋಪಿ ವಿರುದ್ಧ 9 ಪ್ರಕರಣಗಳು ದಾಖಲಾಗಿದ್ದು, ನಾಲ್ಕನೇ ಆರೋಪಿ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದ್ದು, ಅವುಗಳ ದಾಖಲೆಗಳನ್ನು ಸಂಗ್ರಹಿಸಿ, ಆರೋಪಿತರ ವಿರುದ್ಧ ಸಾಕ್ಷಿ ಪುರಾವೆ ದೊರೆತಿದ್ದರಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ71 ಅಸಾ.20 ಮುಂದುವರಿದು, ನಂತರ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಹಾಗೂ ಕೃತ್ಯಕ್ಕೆ ಬಳಸಿದ ಆಯುಧವನ್ನು ವೈದ್ಯಾಧಿಕಾರಿಗಳ ಮುಂದೆ ಹಾಜರುಪಡಿಸಿ ಮರಣದ ಬಗ್ಗೆ ಅಂತಿಮ ಅಭಿಪ್ರಾಯ ನೀಡುವಂತೆ

ಕೋರಿ, ಅಭಿಪ್ರಾಯ ಪಡೆದು ಹೆಚ್ಚಿನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ72 ನೀವು ಏನಾದರು ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆಃ73 ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)

ಸಹಿ/-

ದಿನಾಂಕಃ 08.01.2026 ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.